# ದೋಸೆಯ ದಾಸ

**ಶಿರಸಿ, ಸಿದ್ದಾಪುರ, ಯಲ್ಲಾಪುರ ಸೀಮೆಯಲ್ಲಿ ಹಿಟ್ಟನ್ನು ತೆಳ್ಳಗೆ ಮಾಡಿ ಕಾವಲಿ ಮೇಲೆ ಸೃಷ್ಟಿಸುವ ಬೆಳ್ಳಗಿನ ದೋಸೆಗೆ ತೆಳ್ಳೇವು ಎನ್ನುತ್ತಾರೆ. ಈ ತೆಳ್ಳೇವಿಗೆ ಜೋನಿ ಬೆಲ್ಲವನ್ನೋ ಅಥವಾ ಜೇನುತುಪ್ಪವನ್ನೋ ಸೇರಿಸಿಕೊಂಡು ಬಾರಿಸಿದರೆ ಡಜನ್ ಡಜನ್ ಲೆಕ್ಕದಲ್ಲಿ ಹೊಟ್ಟೆಗೆ ಸದ್ದಿಲ್ಲದೇ ಸೇರಿಕೊಳ್ಳುತ್ತವೆ.**

**ರಾಜು ಅಡಕಳ್ಳಿ**
ಕಲೆ: ಸಂತೋಷ್ ಸಸಿಹಿತ್ಲು

ಮಲೆನಾಡು, ಕರಾವಳಿಯ ಮನೆಗಳಲ್ಲಿ ಬೆಳಿಗ್ಗೆ ಬೆಳಿಗ್ಗೆ ವೆಂಕಟೇಶ್ವರ ಸುಪ್ರಭಾತ ಕೇಳದೇ ಇರಬಹುದು, ಆದರೆ ಕಾವಲಿಯ ಮೇಲೆ ಸುಯ್ ಸುಯ್ ಗುಡುವ ನಿನಾದವನ್ನು ನಿತ್ಯ ಕೇಳಬಹುದು. ಕಾರಣ ಈ ಭಾಗಗಳಲ್ಲಿ ದೋಸೆಗೆ ನಿತ್ಯ ಪೂಜೆ. ಬೆಳಿಗ್ಗೆ ತಿಂಡಿಗೆ ದೋಸೆಯಷ್ಟು ಪ್ರಶಸ್ತ ಆಹಾರ ಇನ್ನೊಂದಿಲ್ಲ ಎಂಬುದು ಸ್ಥಳೀಯರ ಅನುಭವ.

ಎಲ್ಲೋ ಅಪರೂಪಕ್ಕೊಮ್ಮೆ ದೋಸೆಯ ಬದಲು ಅವಲಕ್ಕಿ, ಉಪ್ಪಿಟ್ಟು ಅಥವಾ ಇಡ್ಲಿಯನ್ನು ಬೆಳಗಿನ ಉಪಾಹಾರಕ್ಕೆ ತಿಂದರೆ ಕೆಲವರು ದೋಸೆಗೆ ದಾಸರಾಗಿ ಡಿಸೆಂಟ್ರಿಯಿಂದ ಪರಿತಪಿಸುತ್ತಾರೆ. ದೋಸೆಯನ್ನು ನಂಬಿ ಕೆಟ್ಟವರಿಲ್ಲಯ್ಯ ಎಂಬುದು ಅವರ ಪಾಲಿಗಂತೂ ನಿತ್ಯ ಸತ್ಯ. ಹೀಗಾಗಿ ಎಷ್ಟೋ ಮಂದಿ ಮಲೆನಾಡಿಗರು ಆಯುಷ್ಯ ಪೂರ್ತಿ ಬೆಳಿಗ್ಗೆ ದೋಸೆ ತಿಂದುಕೊಂಡೇ ಧೀಮಂತರಾಗಿ ಬಾಳಿದರು. ಮಕ್ಕಳಿಂದ ಹಿಡಿದು ಮುದುಕರವರೆಗೂ ದೋಸೆ ಎಲ್ಲರಿಗೂ ಪ್ರಿಯವೇ. ಹಲ್ಲಿಲ್ಲದ ಅಜ್ಜ ಅಜ್ಜಿಯರಿಗೂ ಮೃದುವಾದ ದೋಸೆ ಮಧುಚಂದ್ರದಂತೆ ಮನಸ್ಸಿಗೆ ಮುದ ಕೊಡುವಂಥದ್ದು. ಇನ್ನು ದೋಸೆಯ ಶೋಕಿ ಬೆಳೆಸಿಕೊಂಡ ಶೋಕಿಲಾಲರಿಗೆ ಬೆಳಿಗ್ಗೆ ದೋಸೆ ಜೊತೆಗೆ ಚಹಾ ಕುಡಿದು ದಿನಚರಿ ಪ್ರಾರಂಭಿಸಿದರೆ ಅಂದಿನ ಜೀವನವೇ ಜಿಂಗಾಲಾಲಾ.

ನಾನಂತೂ ಹಸಿವಾದಾಗ ‘ದಾಸನ ಮಾಡಿಕೋ ಎನ್ನ…’ ಎಂದು ದೋಸೆಯಲ್ಲಿ ಪ್ರಾರ್ಥಿಸುತ್ತಾ ದೋಸೆಯ ಭಕ್ತನಾಗುತ್ತೇನೆ. ಕೆಲವರಿಗೆ ಹುಡುಗಿಯರೆಂದರೆ ವೀಕ್ನೆಸ್. ಇನ್ನೂ ಕೆಲವರಿಗೆ ಡ್ರಿಂಕ್ಸ್ ಎಂದರೆ ಅಪಾರ ಪ್ರೀತಿ. ಆದರೆ ನನ್ನ ಪಾಲಿಗೆ ದೋಸೆಯೇ ದೇವರು ಕೊಟ್ಟ ವರ. ಮದುವೆಯಾದ ನಂತರ ಪ್ರತಿನಿತ್ಯ ಹೆಂಡತಿ ಕೊಡುತ್ತಿರುವ ವರ ಪ್ರಸಾದವೆಂದರೆ ಅದು ದೋಸೆ. ಕೆಲವೊಮ್ಮೆ ನನ್ನ ಹೆಂಡತಿ ದೋಸೆಯನ್ನೇ ತನ್ನ ಅಸ್ತ್ರವನ್ನಾಗಿ ಮಾಡಿಕೊಂಡು, ನನಗೆ ದೋಸೆ ನಾಸ್ತಿ ಎಂಬ ಶಾಸ್ತಿ ಮಾಡಿದ್ದಿದೆ.

ತನ್ನ ಹುಟ್ಟುಹಬ್ಬಕ್ಕೆ ರೇಷ್ಮೆ ಸೀರೆಯನ್ನು ನೀವು

